# ಹುತ್ತ ಕಟ್ಟದೆ ಚಿತ್ತ

ಕುವೆಂಪು ಅವರು ಮೊದಲ ತಲೆಮಾರಿನ ಶೂದ್ರಕವಿ. ಮಲೆನಾಡಿನಿಂದ ಮೈಸೂರಿಗೆ ಬಂದ ಅವರಿಗೆ ಸಂಸ್ಕೃತವನ್ನು ಕಲಿಯಲು ನಿರಾಕರಿಸಲಾಗುತ್ತದೆ. ತಮಗೆ ನೋಯಿಸಿದ ಕಗ್ಗಗಳ ಸಹವಾಸವೇ ಬೇಡವೆಂದು ಸಾಮಾನ್ಯರು ದೂರವುಳಿಯುತ್ತಾರೆ. ಆದರೆ ಪ್ರತಿಭಾಶಾಲಿಗಳು, ನವಯುಗದ ಕನಸು ಕಂಡವರು ತಮ್ಮ ಕೃತಿಗಳ ಮೂಲಕ ಅದನ್ನು ಮೀರಲೆತ್ನಿಸುತ್ತಾರೆ. ಕುವೆಂಪುರವರ ಮೂರು ನಾಟಕಗಳು ಈ ಹಿನ್ನೆಲೆಯಲ್ಲಿ ಬಹುಮುಖ್ಯವಾದವು. ಶೂದ್ರರ ನಂಬಿಕೆ, ಬದುಕುಗಳನ್ನು ರೂಪಿಸುತ್ತಿದ್ದ ವೇದಪುರಾಣಗಳು, ರಾಮಾಯಣ, ಮಹಾಭಾರತಗಳು ಈ ಅಸಮಾನತೆಯ ಬದುಕನ್ನು ಸರಿಪಡಿಸುವ ಆಕೃತಿಗಳಾಗಿ ಅವರಿಗೆ ಕಂಡುಬರುತ್ತವೆ. ವಿಶೇಷವಾಗಿ 'ಜಲಗಾರ', 'ಶಂಭೂಕ' ಹಾಗೂ 'ಏಕಲವ್ಯ' ಪಾತ್ರಗಳನ್ನು ಕತ್ತಲಲ್ಲಿದ್ದವರ ಪ್ರತಿನಿಧಿಗಳೆಂಬಂತೆ ಅವರು ಕಂಡುಕೊಳ್ಳುತ್ತಾರೆ. 'ಶೂದ್ರತಪಸ್ವಿ' ಅದು ಕಟ್ಟಿಕೊಡುವ ಆಶಯದಿಂದಲೇ ವಿಶಿಷ್ಟವಾದ ನಾಟಕ. ಆ ಕಾಲದ ಲೇಖಕರಿಂದ ವರ್ಣವ್ಯವಸ್ಥೆಯ ಪರವಾಗಿ ಬಿರುಸಾದ ಟೀಕೆಗೆ ಒಳಗಾಗಿರುವ ಕೃತಿಯಿದು.

ಸೀತಾಪರಿತ್ಯಾಗದ ನಂತರ ರಾಮ ಪ್ರಜೆಗಳ ಕಣ್ಣಿನಲ್ಲಿ ಆದರ್ಶಪುರುಷನಾಗುತ್ತಾನೆ. ಅದೇ ಸಂದರ್ಭದಲ್ಲಿ ದಂಡಾಕಾರಣ್ಯದಲ್ಲಿ ಶಂಭೂಕನೆನ್ನುವ ಶೂದ್ರ ತಪಸ್ಸು ಮಾಡಲಾರಂಭಿಸುತ್ತಾನೆ. ದಂಡಾಕಾರಣ್ಯದಲ್ಲಿ ಬ್ರಾಹ್ಮಣನ ಮಗನೊಬ್ಬ ಹೂವು ಕೀಳಲೆಂದು ಹೋದವನು ಹಾವು ಕಚ್ಚಿಸಿಕೊಂಡು ಮರಣಕ್ಕೆ ಈಡಾಗುತ್ತಾನೆ. ಮಗನನ್ನು ಕಳೆದುಕೊಂಡ ಆ ಬ್ರಾಹ್ಮಣ, ಅರಮನೆಯ ಉದ್ಯಾನವನದಲ್ಲಿ ಕುಳಿತು ರೋಧಿಸಲಾರಂಭಿಸುತ್ತಾನೆ. ಆಗ ಅರಮನೆಯಿಂದ ಹೊರಬಂದ ರಾಮ ಅವನ ಕತೆ ಕೇಳುತ್ತಾನೆ. ನಿನ್ನ ಮಗನ ಮರಣಕ್ಕೆ ಕಾರಣರಾದವರನ್ನು ವಧಿಸುತ್ತೇನೆ ಎಂದು ಬ್ರಾಹ್ಮಣನೊಂದಿಗೆ ಪುಷ್ಪಕವಿಮಾನದಲ್ಲಿ ದಂಡಾಕಾರಣ್ಯಕ್ಕೆ ಬರುತ್ತಾನೆ. ಅಲ್ಲಿ 'ನೀನು ಯಾರು' ಎಂದು ಶಂಭೂಕನನ್ನು ಪ್ರಶ್ನಿಸಿ, ಅವನು ಬಾಯ್ಬಿಡುವ ಮುನ್ನವೇ ರಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರ ಅವನ ಶಿರ ಕತ್ತರಿಸುತ್ತದೆ. ಶಂಭೂಕನ ಹತ್ಯೆಗೆ 'ಉಘೇ, ಉಘೇ' ಎನ್ನುವ ಉದ್ಗಾರಗಳು ಆಕಾಶದಿಂದ ಕೇಳಿಬರುತ್ತವೆ.

'ಉತ್ತರರಾಮಚರಿತ'ದಲ್ಲಿ ಭವಭೂತಿ, ಹತ್ಯೆಗೊಳಗಾದ ಶಂಭೂಕನ ಆತ್ಮ ಇಹಜನ್ಮದಿಂದ ತನಗೆ ಮುಕ್ತಿಕೊಟ್ಟ ರಾಮನಿಗೆ ನಮಿಸುತ್ತಾ ಅಶರೀರವಾಣಿಯಿಂದ ಮಾತನಾಡುತ್ತಾ ಆಕಾಶದ ಎಡೆಗೆ ಚಲಿಸಿತು ಎಂಬ ಮಾನವೀಯ ಸ್ಪರ್ಶವನ್ನು ಕಟ್ಟಿಕೊಟ್ಟಿದ್ದಾನೆ. ಇಲ್ಲಿ ಭವಭೂತಿಯ ಮನಸ್ಸು ಶಂಭೂಕನ ಬಗ್ಗೆ ಮರುಗಿದಂತೆ ತೋರುತ್ತದೆ.

ಈ ಕತೆ ಕುವೆಂಪು ಅವರನ್ನು ಬಹಳವಾಗಿ ಕಾಡಿದೆ. ವಲ್ಮೀಕದಿಂದ ಜನಿಸಿದ ವಾಲ್ಮೀಕಿ ಇಂತಹ ಹತ್ಯೆಯನ್ನು ಸಾಧು ಎನ್ನುವ ಹಾಗೆ ಬರೆಯಲು ಹೇಗೆ ಸಾಧ್ಯ. ಇದು ಕಾಲಾನಂತರ ಒಂದು ವರ್ಗದ ಸೇರ್ಪಡೆಯಾಗಿರಬೇಕು ಎಂಬ ಚಿಂತನೆ ಅವರನ್ನು ಕಾಡಿದೆ. ರಾಮಾಯಣದ ಕತೆ ರಾಮನ ಜೀವಿತದ ಕಾಲದಲ್ಲೇ ಬಾಯಿಂದ ಬಾಯಿಗೆ ಹಾಡಿನ ಮೂಲಕ ದಾಟುತ್ತಿದ್ದುದರ ಬಗ್ಗೆ ಸಾಕಷ್ಟು ಮಾಹಿತಿಗಳು ನಮ್ಮಲ್ಲಿ ಸಿಕ್ಕುತ್ತವೆ. ರಾಮನ ಮಕ್ಕಳಾದ ಲವ–ಕುಶರು ತಮ್ಮ ವಂಶದ ಕತೆಯನ್ನು ಹಾಡುತ್ತಿದ್ದರು ಎಂದು ಕೇಳಿದ್ದೇವೆ. ಶ್ರಾವ್ಯ ಪರಂಪರೆಯಲ್ಲಿ ಹಾಡುಗಾರರಿಗೆ ಮೂಲಕಥಾನಕದಲ್ಲಿ ತಮಗೆ ಬೇಕಾದಂತೆ ಸೇರಿಸುವ, ತೆಗೆಯುವ ಸ್ವಾತಂತ್ರ್ಯವಿರುತ್ತದೆ.

ಕುವೆಂಪು ತಮ್ಮ ನಾಟಕದ ಮುನ್ನುಡಿಯಲ್ಲಿ 'ಉತ್ತಮ ಶಿಲ್ಪಿ ಕಟ್ಟಿದ ದೇವಾಲಯದಲ್ಲಿ ಅದು ಹಳತಾಗುತ್ತಾ ಬಂದಂತೆಲ್ಲ ಇಲಿ, ಹಲ್ಲಿ, ಬಾವಲಿ ಮುಂತಾದ ಜೀವಜಂತುಗಳು ಬೀಡುಬಿಟ್ಟು ಆಶ್ರಯ ಪಡೆಯುತ್ತವೆ. ವಾಲ್ಮೀಕಿಯ ಕೃತಿಗೂ ಅಂತಹ ಗತಿ ಒದಗಿದರೆ ಅದು ಅದರ ಪುರಾತನತ್ವವನ್ನು ಎತ್ತಿ ಹಿಡಿಯುತ್ತದೆ. ಗುಡಿಗೆ ಪೂಜೆಗೆಂದು ಹೋದವರು ದೇವಾಲಯದಲ್ಲಿವೆ ಎಂದ ಮಾತ್ರಕ್ಕೆ ಕ್ರಿಮಿಕೀಟಗಳನ್ನು ಪೂಜಿಸಲಾಗುವುದಿಲ್ಲ. ಇದೇ ರೀತಿ ಮಹಾಕವಿಯ ಕೃತಿಯಲ್ಲಿ ಸೇರಿರುವ ಕುಕವಿಗಳ ಪ್ರಕ್ಷಿಪ್ತಗಳನ್ನು ಯಾರೂ ಗೌರವಿಸುವುದಿಲ್ಲ. ಶಂಭೂಕವಧೆ ಪ್ರಸಂಗವೂ ಅಂತಹ ಒಂದು ಪ್ರಕ್ಷಿಪ್ತವಾಗಿದೆ. ರಾಮ ಕೇವಲ ದೇವಮಾನವನಲ್ಲ. ಜನಮಾನಸದಲ್ಲಿ ನೆಲೆನಿಂತ ದೈವ. ತನ್ನನ್ನು ಆರಾಧಿಸುವ ಭಕ್ತರ ಪಾಲಿನ ಆದರ್ಶದೈವ. ಶಬರಿ ಭಕ್ತಿಯಿಂದ ಹುಳುಕಿಲ್ಲದ ಹಣ್ಣುಗಳನ್ನು ಕಚ್ಚಿಕಚ್ಚಿ ಪರೀಕ್ಷಿಸಿ ಕೊಟ್ಟಾಗ ಎಂಜಲಾದರೂ ಅದನ್ನು ಗಣಿಸದೆ ತಿನ್ನುತ್ತಾನೆ. ಕಲ್ಲಾದ ಅಹಲ್ಯೆಗೆ ಜೀವತುಂಬುತ್ತಾನೆ. ಗುಣವಂತ ರಾಮನನ್ನಾಗಿ, ಮೌಲ್ಯವನ್ನು ಕಾಣುವ ರಾಮನನ್ನಾಗಿ ತನ್ನ ರಾಮಧಾನ್ಯಚರಿತೆಯಲ್ಲಿ ಕನಕದಾಸ ಕಟ್ಟಿಕೊಡುತ್ತಾನೆ. ಇಂತಹ ರಾಮಕತೆಗೆ ಶಂಭೂಕವಧೆಯ ಪ್ರಸಂಗ ಕಪ್ಪುಚುಕ್ಕೆಯಾಗಿ ಕಂಡುಬರುತ್ತದೆ' ಎಂದಿದ್ದಾರೆ.

ಮರ್ಯಾದಾ ಪುರುಷೋತ್ತಮನಾದ ರಾಮನನ್ನು ಕುವೆಂಪು ಮಾನವೀಯ ರಾಮನನ್ನಾಗಿ ಚಿತ್ರಿಸುತ್ತಾರೆ. ಒಂದು ನಾಡಿನ ಹಿರಿದಾದ ಸಂಸ್ಕೃತಿ, ಜನಮಾನಸದ ಚಿಂತನೆಗಳನ್ನು ಬಲ್ಲವರು ಮಾತ್ರ ರಾಮಾಯಣ, ಮಹಾಭಾರತಗಳನ್ನು ಪುನರ್ ರೂಪಿಸಲು, ವ್ಯಾಖ್ಯಾನಿಸಲು ಸಾಧ್ಯ. ಇದನ್ನು ಪಂಪ, ನಾಗಚಂದ್ರ, ಕುಮಾರವ್ಯಾಸ ಮುಂತಾದ ಕವಿಗಳು ತಮಗೆ ಸರಿಕಂಡ ಹಾಗೆ ಆ ಮಹಾಕಾವ್ಯಗಳನ್ನು ಪುನರ್ ರಚಿಸಿದ್ದಾರೆ. ಕುವೆಂಪು ಕುಂದು ತರುವ ಪ್ರಕ್ಷಿಪ್ತವಾದ ಶಂಭೂಕವಧೆಯಲ್ಲಿ ಭಕ್ತವತ್ಸಲನಾದ, ನ್ಯಾಯನಿಷ್ಠುರಿಯಾದ ಹೊಸರಾಮನನ್ನು ಚಿತ್ರಿಸುತ್ತಾರೆ. ಶೂದ್ರನೊಬ್ಬನ ತಪಸ್ಸಿಗೆ ಹೊಸ ಆವರಣವನ್ನು ಕಟ್ಟಿಕೊಡುತ್ತಾರೆ.

ದೂರುತಂದ ಬ್ರಾಹ್ಮಣನನ್ನು ದಂಡಾಕಾರಣ್ಯಕ್ಕೆ ಕರೆದೊಯ್ದ ರಾಮ 'ಕೊಲೆಗಾರನೆಲ್ಲಿದ್ದಾನೆ ತೋರು' ಎನ್ನುತ್ತಾನೆ. ನಾಟಕದಲ್ಲಿನ ವೃಕ್ಷದೇವತೆ, ಭೈರವ, ಮೃತ್ಯುದೇವತೆಗಳು ಶಂಭೂಕನ ವ್ಯಕ್ತಿತ್ವಕ್ಕೆ ಮಾರುಹೋಗಿದ್ದಾರೆ. ಇಡೀ ಪ್ರಕೃತಿಯೇ ಅವನ ತಪಸ್ಸಿಗೆ ಮಣಿದಿದೆ. ಪ್ರಕೃತಿ ಧರ್ಮಕ್ಕೆ ವಿರೋಧವಾಗಿ ನಿಂತಿರುವವನೆಂದರೆ ಬ್ರಾಹ್ಮಣ ಮಾತ್ರ. 'ಅಪರಾಧಿಗಳನ್ನು ವಧಿಸುತ್ತದೆ' ಎಂದು ರಾಮ ಬಿಟ್ಟ ಬಾಣ ನೇರವಾಗಿ ಶಂಭೂಕನೆಡೆಗೆ ಚಿಮ್ಮುತ್ತದೆ. ಆದರೆ ಆಲೋಚನಾಶಕ್ತಿಯಿರುವ ಆ ಬಾಣ ಅವನ ಸುತ್ತ ಮೂರುಸುತ್ತು ಪ್ರದಕ್ಷಿಣೆ ಬಂದು ಹಿಂತಿರುಗಿ ಬ್ರಾಹ್ಮಣನ ಕಡೆಗೆ ಬರಲಾರಂಭಿಸುತ್ತದೆ. ಹೆದರಿದ ಅವನು ರಾಮನೆಡೆಗೆ ತಿರುಗುತ್ತಾನೆ. ಆಗ ರಾಮ ನಿರಪರಾಧಿಯಾದ ಶಂಭೂಕನ ಪಾದಕ್ಕೆ ಬಿದ್ದು ಕ್ಷಮೆ ಬೇಡಿದರೆ ನೀನು ಉಳಿಯುತ್ತೀಯಾ ಎನ್ನುತ್ತಾನೆ. ಶಂಭೂಕನ ಪಾದಕ್ಕೆ ನಮಸ್ಕರಿಸಿದ ನಂತರ ಅವನು ಉಳಿಯುತ್ತಾನೆ. ಅವನ ಮಗನೂ ಮರಳಿ ಜೀವಪಡೆಯುತ್ತಾನೆ. ಇಷ್ಟೆಲ್ಲಾ ಕಥೆ ಶಂಭೂಕನ ಸುತ್ತ ನಡೆದರೂ ಅವನು ಮಾತ್ರ ತನ್ನ ಸುತ್ತಲೂ ಕಟ್ಟಿದ ವಲ್ಮೀಕದೊಳಗೆ ತಪೋಮಗ್ನನಾಗಿದ್ದ.

ಹುತ್ತ ಕಟ್ಟದೆ ಚಿತ್ತ ಕೆತ್ತೀತೆ ಅಂತಹ ಮೂರ್ತಿಯನ್ನು ಎಂಬ ಮಾತಂತೂ ನಿಜ. ಕುವೆಂಪು ಅವರು ಯುಗಧರ್ಮ ಪ್ರವರ್ತಕ ಕವಿ, ಯುಗನಿರ್ಮಾಪಕ ಕವಿ ಎಂದು ಕರೆಸಿಕೊಂಡಿದ್ದು ಇಂತಹ ಕಾಣ್ಕೆಗಳಿಂದಲೇ. ಹೊಸಕಾಲದ ರಾಮ ಸಕಲರ ಕ್ಷೇಮ ಬಯಸುವವನಾದರೆ, ಹುತ್ತದೊಳಗಿನ ಶಂಭೂಕ ಇಹಪರ ಮೀರಿದ ಯೋಗದಲ್ಲಿ ಮುಳುಗಿದ್ದಾನೆ. ವರ್ಣಧರ್ಮ ಮೀರಿದ ತಪಸ್ಸಿನಲ್ಲಿ ತೊಡಗಿದ್ದಾನೆ. ಇದು ಹೊಸ ಕಾಲದ ಕಾಣ್ಕೆ, ಹೊಸಕಾಲದ ಮೌಲ್ಯದ ಶೋಧ.

■ **ಅಮೃತಮತಿ**

## ಮಾತೇ ಮುತ್ತು

- ಹೆಂಡತಿ ಎಂಬುವವಳು ಗಂಡನಿಗೆ ಕೋಳವಲ್ಲದಿದ್ದರೂ ಭದ್ರವಾದ ಬಂಧನವೇ.
  —ಸೋಮದೇವ
- ಅತೀ ಆಸ್ತಿಕತೆ ನಾಸ್ತಿಕತೆಯ ಮೆಟ್ಟಿಲನ್ನು ಹತ್ತಿಸುತ್ತದೆ.
  —ಎಮರ್ಸನ್
- ಪ್ರೇಮಕ್ಕೆ ದೇವರ ಧರ್ಮದ ಬಲವಿದೆ. ಅಭಯದ ಆಶ್ರಯವಿದೆ. ಅದೂ ಒಂದು ಮಹತ್ತರವಾದ ತಪಸ್ಸು.
  —ಕುವೆಂಪು
- ಮರದಲ್ಲಾಗಲೀ ಕಲ್ಲಿನಲ್ಲಾಗಲೀ ದೇವರಿಲ್ಲ. ದೇವರು ಇರುವುದು ಮನಸ್ಸಿನ ಭಾವನೆಯಲ್ಲಿ.
  —ವಿಕ್ರಮ ಚರಿತ
- ಅತ್ಯಂತ ನೋವಿನ ಅನುಭವಗಳನ್ನು ಮನಸ್ಸು ತನ್ನ ಅಂತರ್ಯದಲ್ಲಿ ದಬ್ಬಿ ಇಡುತ್ತದೆ.
  —ಸಿಗ್ಮಂಡ್ ಫ್ರಾಯ್ಡ್